# ಪದೇ ಪದೇ ಕೇಳಲಾಗುವ ಪ್ರಶ್ನೆಗಳು:

**1. ವಿದ್ಯಾರ್ಥಿಬಸ್ ಪಾಸಿಗಾಗಿ ಅರ್ಜಿ ಸಲ್ಲಿಸುವ ವಿಧಾನ?**

- ಆನ್‌ಲೈನ್ ಮೂಲಕ ಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಲು www.mybmtc.com ಗೆ ಬೇಟಿ ನೀಡಿ. 'ವಿದ್ಯಾರ್ಥಿ ಪಾಸ್' ಅನ್ನುಕ್ಲಿಕ್ ಮಾಡಿ, ನಂತರ ಇ-ಫಾರ್ಮ್ಮೂಲಕವಿದ್ಯಾರ್ಥಿಪಾಸಿಗೆ ಅರ್ಜಿ ಸಲ್ಲಿಸಲು:ಕ್ಲಿಕ್ಮಾಡಿ
  (ಆನ್‌ಲೈನ್/ ಸ್ಥಳದಲ್ಲಿ ಹಣ ಪಾವತಿ)

**2. ವಿದ್ಯಾರ್ಥಿ ಪಾಸಿನ ಸ್ಥಿತಿಯನ್ನು ತಿಳಿಯುವುದು ಹೇಗೆ?**

- www.mybmtc.comಗೆ ಬೇಟಿ ನೀಡಿ. 'ವಿದ್ಯಾರ್ಥಿ ಪಾಸ್' ಅನ್ನುಕ್ಲಿಕ್ ಮಾಡಿ, ನಂತರವಿದ್ಯಾರ್ಥಿಪಾಸಿನಸ್ಥಿತಿಯನ್ನುತಿಳಿಯಲು :ಕ್ಲಿಕ್ಮಾಡಿ

**3. ವಿದ್ಯಾರ್ಥಿಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಲುಕೊನೆಯ ದಿನಾಂಕ?**

- ವಿದ್ಯಾರ್ಥಿ ಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಲುಕೊನೆಯ ದಿನಾಂಕವಿರುವುದಿಲ್ಲ.ಆದರೆ 30ನೇ ನವೆಂಬರ್ 2018 ರ ನಂತರಪಾಸ್‌ಕೌಂಟರ್‌ನಲ್ಲಿಸ್ಥಳದಲ್ಲೇ ವಿದ್ಯಾರ್ಥಿ ಪಾಸನ್ನು ಮುದ್ರಿಸಲಾಗುವುದಿಲ್ಲ.

**4. ವಿದ್ಯಾರ್ಥಿಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಿರುವ ಸ್ವೀಕೃತಿಯನ್ನು ಹಾಗೂ ಗುರುತಿನಚೀಟಿಯನ್ನು ಹೊಂದಿ ಬೆ.ಮ.ಸಾ.ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಲುಕೊನೆಯ ದಿನಾಂಕ?**

- 15ನೇನವೆಂಬರ್2018ರ ನಂತರ ಸಂಸ್ಥೆಯ ವಾಹನಗಳಲ್ಲಿ ವಿದ್ಯಾರ್ಥಿ ಪಾಸನ್ನು ಹೊಂದಿ ಪ್ರಯಾಣಿಸುವುದುಕಡ್ಡಾಯವಾಗಿದೆ.

**5. ವಿದ್ಯಾರ್ಥಿಬಸ್ ಪಾಸಿನ ಸ್ಥಿತಿಗತಿಯ ವಿವರಗಳು:**

a) **CardPrintedandDispatchedthroughpost**
ವಿದ್ಯಾರ್ಥಿ ಪಾಸನ್ನು ಮುದ್ರಿಸಿ ಅಂಚೆಯ ಮೂಲಕ ಈಗಾಗಲೇ ಕಳುಹಿಸಲಾಗಿರುತ್ತದೆ.ಒಂದು ವೇಳೆ ವಿದ್ಯಾರ್ಥಿಯು ಅಂಚೆ ಮೂಲಕ ಪಾಸನ್ನು ಸ್ವೀಕರಿಸದಿದ್ದಲ್ಲಿ, ಶಾಂತಿನಗರ ಬಸ್ ನಿಲ್ದಾಣಕ್ಕೆ ಪಾಸಿನ ಮೊತ್ತ ಹಾಗೂ ಶಾಲಾ/ ಕಾಲೇಜಿನಗುರುತಿನಚೀಟಿಯೊಂದಿಗೆ 30ನೇ ನವೆಂಬರ್ 2018 ರ ಒಳಗಾಗಿ ಭೇಟಿ ನೀಡುವುದು. ಹೊಸ ಕಾರ್ಡ್ ಪಡೆಯಲು ಹೆಚ್ಚುವರಿಯಾಗಿರೂ 50/– ಅನ್ನು ಪಾವತಿಸಿದ ನಂತರ ಹಳೇ ಪಾಸನ್ನು ಬ್ಲಾಕ್ ಮಾಡಿ ಹೊಸ ಕಾರ್ಡ್‌ನ್ನು ವಿತರಿಸಲಾಗುವುದು

b) **Card Printed and Collected**
ವಿದ್ಯಾರ್ಥಿಯಪಾಸನ್ನುಮುದ್ರಿಸಿದ ನಂತರ ವಿದಾರ್ಥಿಯುಖುದ್ದಾಗಿ ಪಾಸನ್ನು ಸ್ವೀಕರಿಸಿರುತ್ತಾರೆ.

c) **Ready to be printed/ Ready to be printed after verification**

- **'Ready to be printed'** ಇದ್ದಲ್ಲಿವಿದ್ಯಾರ್ಥಿಪಾಸಿಗಾಗಿಅರ್ಜಿಯನ್ನುಬೆಂ.ಮ.ಸಾ.ಸಂಸ್ಥೆಯು ಸ್ವೀಕರಿಸಿರುತ್ತದೆ ಹಾಗೂ ವಿದ್ಯಾರ್ಥಿಯು ಪಾಸನ್ನುಕೆಬಿಎಸ್ಅಥವಾ ಶಾಂತಿನಗರ ಬಸ್ ಪಾಸ್‌ಕೌಂಟರ್‌ನಲ್ಲಿಮುದ್ರಿಸಿಕೊಳ್ಳಬಹುದಾಗಿದೆ.
- **'Ready to be printed after verification'**ಇದ್ದಲ್ಲಿವಿದ್ಯಾರ್ಥಿಯು ಈ ಕೆಳಕಂಡ ದಾಖಲಾತಿಗಳನ್ನು(ಪಾಸ್‌ಕೌಂಟರ್‌ನಲ್ಲಿ ನೀಡಲುಮೂಲ ಪ್ರತಿಗಳೊಂದಿಗೆ ಒಂದು ಸೆಟ್ ನಕಲು ಪ್ರತಿಯನ್ನು) ಪಾಸ್ ಕೌಂಟರ್‌ಗಳಿಗೆ ಬೇಟಿ ನೀಡಿ ನಿಗದಿತ ಮೊತ್ತವನ್ನು ಪಾವತಿಸಿ ಪಾಸ್ನು ಪಡೆಯಬಹುದಾಗಿರುತ್ತದೆ.
  - ಶಾಲಾ/ಕಾಲೇಜಿನಗುರುತಿನಚೀಟಿ.
  - ಶಾಲಾ/ಕಾಲೇಜಿಗೆ ಶುಲ್ಕ ಪಾವತಿಸಿದ ರಶೀದಿ.
  - ಆಧಾರ್‌ಕಾರ್ಡ್.
  - ಜಾತಿ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ ಮಾತ್ರ).
  - ಪಾಸಿನ ಮೊತ್ತ.

d) **Card already printed (Pre-Printed)**

- ವಿದ್ಯಾರ್ಥಿ ಪಾಸನ್ನು ಮುದ್ರಿಸಲಾಗಿದ್ದು ವಿತರಿಸಲು ಸಿದ್ಧವಿರುತ್ತದೆ.
- ವಿದ್ಯಾರ್ಥಿಯು ಶಾಂತಿನಗರ ವಿದ್ಯಾರ್ಥಿಪಾಸ್‌ಕೌಂಟರ್‌ಗೆತಮ್ಮ ಶಾಲಾ/ ಕಾಲೇಜಿನಗುರುತಿನಚೀಟಿ ಹಾಗೂ ಪಾಸಿನ ಮೊತ್ತದೊಂದಿಗೆಭೇಟಿ ನೀಡಿತಮ್ಮ ಪಾಸನ್ನು ಪಡೆಯಬಹುದಾಗಿದೆ.

e) **Card Returned undelivered by post**

ಈ ಪಾಸುಗಳನ್ನು ಅಂಚೆ ಮೂಲಕ ವಿತರಿಸಲು ನೀಡಲಾಗಿದ್ದು, ಆದರೆ ಅಂಚೆ ಇಲಾಖೆಯುಅಪೂರ್ಣ ವಿಳಾಸದಿಂದ ಪಾಸನ್ನು ಹಿಂತಿರುಗಿಸಿರುತ್ತಾರೆ. ಸದರಿವಿದ್ಯಾರ್ಥಿಯುತಮ್ಮ ಶಾಲಾ/ಕಾಲೇಜಿನಗುರುತಿನಚೀಟಿಯೊಂದಿಗೆ ಹಾಗೂ ನಿಗದಿತ ಮೊತ್ತದೊಂದಿಗೆ ಶಾಂತಿನಗರದ ಪಾಸ್‌ಕೌಂಟರ್‌ಗೆ ಭೇಟಿ ನೀಡಿ ಪಾಸನ್ನು ಪಡೆಯುವುದು.

f) **Data showing from IMI Mobile/ Data not found**

ವಿದ್ಯಾರ್ಥಿಯುಒಮ್ಮೆ'cash on delivery'ಅನ್ನುಆಯ್ಕೆ ಮಾಡಿಕೊಂಡು ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸಿ, ನಂತರ ಮತ್ತೊಮ್ಮೆ 'online payment'ಆಯ್ಕೆಯೊಂದಿಗೆಅರ್ಜಿ ಸಲ್ಲಿಸಲಾಗಿರುತ್ತದೆ. ಸದರಿ ವಿದ್ಯಾರ್ಥಿಯು ಈ ಕೆಳಕಂಡ ದಾಖಲಾತಿಗಳನ್ನು (ಪಾಸ್‌ಕೌಂಟರ್‌ನಲ್ಲಿ ನೀಡಲು ಮೂಲ

ಪ್ರತಿಗಳೊಂದಿಗೆ ಒಂದು ಸೆಟ್ ನಕಲು ಪ್ರತಿಯನ್ನು) ಪಾಸ್ ಕೌಂಟರ್‌ಗಳಿಗೆ ಬೇಟಿ ನೀಡಿ ನಿಗದಿತ ಮೊತ್ತವನ್ನು ಪಾವತಿಸಿ ಪಾಸನ್ನು ಪಡೆಯಬಹುದಾಗಿರುತ್ತದೆ.

- ಶಾಲಾ/ಕಾಲೇಜಿನಗುರುತಿನಚೀಟಿ.
- ಶಾಲಾ/ಕಾಲೇಜಿಗೆ ಶುಲ್ಕ ಪಾವತಿಸಿದ ರಶೀದಿ.
- ಆಧಾರ್‌ಕಾರ್ಡ್.
- ಜಾತಿ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ ಮಾತ್ರ).
- ಪಾಸಿನ ಮೊತ್ತ.

**6. ವಿದ್ಯಾರ್ಥಿಯು ಪಾಸನ್ನುಕಳೆದುಕೊಂಡಿದ್ದಲ್ಲಿ, ನಕಲು ಪಾಸನ್ನು ಪಡೆಯುವ ವಿಧಾನ?**

- ಪೊಲೀಸ್‌ಠಾಣೆಯಲ್ಲಿದೂರನ್ನು ದಾಖಲಿಸಿ, ದೂರಿನ ಸ್ವೀಕೃತಿಯನ್ನು ಪಡೆಯುವುದು.
- ಸದರಿದೂರಿನ ಸ್ವೀಕೃತಿ ಹಾಗೂ ಶಾಲಾ/ಕಾಲೇಜಿನಗುರುತಿನಚೀಟಿಯೊಂದಿಗೆಕೆಬಿಎಸ್‌ಅಥವಾ ಶಾಂತಿನಗರಪಾಸ್‌ಕೌಂಟರ್‌ಗೆ ಭೇಟಿ ನೀಡಿ, ದಾಖಲಾತಿಗಳನ್ನು,ಉಳಿದ ಪಾಸಿನ ಅವಧಿಯ ಪಾಸಿನ ಮೊತ್ತ ಹಾಗೂ ಸಂಸ್ಕರಣಾ ಶುಲ್ಕವನ್ನು ಪಾವತಿಸಿ ನಕಲು ಪಾಸನ್ನು ಪಡೆಯುವುದು.

**7. ನಕಲು ಪಾಸನ್ನು ಪಡೆದ ನಂತರಕಳೆದುಕೊಂಡ ಪಾಸು ದೊರೆತಲ್ಲಿ?**

- ಹಳೆಯ ಪಾಸು ಮಾನ್ಯತೆಯನ್ನು ಕಳೆದುಕೊಂಡಿರುತ್ತದೆ. ಸದರಿಕಾರ್ಡ್‌ನ್ನು ಬ್ಲಾಕ್ ಮಾಡಲಾಗಿರುತ್ತದೆ. ಈ ಪಾಸನ್ನು ಬೆಂಮಸಾಸಂಸ್ಥೆಗೆ ಹಿಂತಿರುಗಿಸುವುದು.

**8. ನಕಲು ಪಾಸನ್ನು ಪಡೆದ ನಂತರ, ಅಂಚೆಯ ಮೂಲಕ ಪಾಸನ್ನು ಸ್ವೀಕರಿಸಿದಾಗ?**

- ಹಳೆಯ ಪಾಸು ಮಾನ್ಯತೆಯನ್ನು ಕಳೆದುಕೊಂಡಿರುತ್ತದೆ. ಸದರಿಕಾರ್ಡ್‌ನ್ನು ಬ್ಲಾಕ್ ಮಾಡಲಾಗಿರುತ್ತದೆ. ಈ ಪಾಸನ್ನು ಬೆಂಮಸಾಸಂಸ್ಥೆಗೆ ಹಿಂತಿರುಗಿಸುವುದು.

**9. ಹಾನಿಯಾದ ಪಾಸು/ ಹೆಸರು ಹಾಗೂ ಭಾವಚಿತ್ರತಪ್ಪಾಗಿ ಪ್ರಿಂಟ್‌ಆಗಿದ್ದಲ್ಲಿ?**

- ಶಾಲಾ/ಕಾಲೇಜಿನಗುರುತಿನಚೀಟಿ ಹಾಗೂ ಹಾನಿಯಾದ ಪಾಸು/ ಹೆಸರು ಹಾಗೂ ಭಾವಚಿತ್ರತಪ್ಪಾಗಿ ಪ್ರಿಂಟ್‌ಆದ ಪಾಸಿನೊಂದಿಗೆ ಕೆಬಿಎಸ್‌ಅಥವಾ ಶಾಂತಿನಗರಪಾಸ್ ಕೌಂಟರ್‌ಗಳಿಗೆ ಭೇಟಿ ನೀಡಿ, ಸದರಿ ಪಾಸನ್ನು ಹಿಂದಿರುಗಿಸಿ, ರೂ.200/– ನ್ನು ಪಾವತಿಸಿ ನಕಲು ಪಾಸನ್ನು ಪಡೆಯಬಹುದಾಗಿರುತ್ತದೆ.

**10. ಆನ್‌ಲೈನ್ ನಲ್ಲಿ ಪಾವತಿಸಿದ ಮೊತ್ತವನ್ನು ವಿದ್ಯಾರ್ಥಿಯುಮರುಪಾವತಿ ಪಡೆಯುವ ವಿಧಾನ?**

- ವಿದ್ಯಾರ್ಥಿಯು ಪಾಸ್ ಕೌಂಟರ್‌ಗಳಲ್ಲಿ ನಿಗದಿತ ಮೊತ್ತವನ್ನು ಪಾವತಿಸಿ ಪಾಸನ್ನು ಪಡೆದಿದ್ದಲ್ಲಿ ಹಾಗೂ ಆನ್‌ಲೈನ್‌ನಲ್ಲಿಯೂ ಸಹ ಮೊತ್ತವನ್ನು ಪಾವತಿಸಿದ್ದು, ಸದರಿ ಮೊತ್ತವನ್ನು ಹಿಂದಿರುಗಿಸುವಕಾರ್ಯವು ಪ್ರಗತಿಯಲ್ಲಿದ್ದು, 30ನೇ ನವೆಂಬರ್ 2018 ರ ನಂತರhttp://www.mybmtc.comನಲ್ಲಿ ಮರುಪಾವತಿಕೋರಿಕೆಅರ್ಜಿಯ ಲಿಂಕ್‌ಅನ್ನು ನೀಡಲಾಗುವುದು.